# ಸ್ವಾಮಿ ಬೋಧಾತ್ಮಾನಂದ (೧೯೦೦-೧೯೭೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

## ಭಾಗ-೧

೧೯೦೦ರಲ್ಲಿ ಹುಟ್ಟಿದ ಸ್ವಾಮಿ ಬೋಧಾತ್ಮಾನಂದರು ೧೯೨೩ರಲ್ಲಿ ಸ್ವಾಮಿ ಶಿವಾನಂದಜಿಯವರಿಂದ ಮಂತ್ರದೀಕ್ಷೆಯನ್ನು ಪಡೆದು, ೧೯೨೮ರಲ್ಲಿ ರಾಮಕೃಷ್ಣ ಸಂಘವನ್ನು ಸೇರಿದರು. ೧೯೨೯ನೇ ಇಸವಿಯಲ್ಲಿ ತಮ್ಮ ಗುರುಗಳಿಂದ ಸಂನ್ಯಾಸವನ್ನು ಪಡೆದ ಅವರು, ೧೯೫೬ನೆ ಇಸವಿಯಲ್ಲಿ ಬೇಲೂರು ಮಠದ ಬ್ರಹ್ಮಚಾರಿ ತರಬೇತಿ ಕೇಂದ್ರದ ಪ್ರಥಮ ಅಧ್ಯಕ್ಷರಾದರು. ಅವರು ೨೮.೦೭.೧೯೭೮ರಂದು ಬೇಲೂರು ಮಠದಲ್ಲಿ ದೇಹತ್ಯಾಗ ಮಾಡಿದರು.

ಸ್ವಾಮಿ ಬೋಧಾತ್ಮಾನಂದರು ರಾಮಕೃಷ್ಣ ಸಂಘದಲ್ಲಿ 'ಭವ ಮಹಾರಾಜ್' ಎಂಬ ಹೆಸರಿನಿಂದ ಸುಪರಿಚಿತರು. ಅವರೊಬ್ಬ ಶಾಸ್ತ್ರಜ್ಞ, ಸಾಧಕ ಹಾಗೂ ಸ್ನೇಹಪೂರ್ಣ ಸಂನ್ಯಾಸಿಗಳಾಗಿದ್ದರು. ಅವರ ಬಳಿ ಸಾರಿದವರಿಗೆಲ್ಲ ಅವರು ಪ್ರೇರಣೆಯನ್ನು ನೀಡುತ್ತಿದ್ದರು. ನಾನು ಅವರನ್ನು ಸಾಧು-ಬ್ರಹ್ಮಚಾರಿಗಳ ಅಧ್ಯಾಪಕರನ್ನಾಗಿ ನೋಡಿರುವೆ. ಅವರು ತ್ಯಾಗ-ವೈರಾಗ್ಯಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಿದ್ದರು. ಶಾಸ್ತ್ರಗಳ ಹಾಗೂ ಶ್ರೀರಾಮಕೃಷ್ಣರ ಶಿಷ್ಯರುಗಳ ಬಗ್ಗೆ ಎಷ್ಟು ಮಾತನಾಡಿದರೂ ಅವರು ದಣಿದವರಲ್ಲ. ಸಾಧು-ಬ್ರಹ್ಮಚಾರಿಗಳಿಗೆ ತರಬೇತು ನೀಡುವುದೆಂದರೆ ಅದೇನೂ ಸಾಮಾನ್ಯ ಮಾತಲ್ಲ. ೧೯೫೬ರಲ್ಲಿ ಬೇಲೂರು ಮಠದ ಟ್ರೇನಿಂಗ್-ಸೆಂಟರನ್ನು ಪ್ರಾರಂಭಿಸಿದಾಗ ಆಡಳಿತ ಮಂಡಲಿಯವರು ಸ್ವಾಮಿ ಬೋಧಾತ್ಮಾನಂದಜಿಯರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಅವರು ತಮ್ಮ ಜೀವನದ ಕೊನೆಯ ದಿನದವರೆಗೂ ಆ ಪದವಿಯಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಿದರು. ''ಭವ, ನಮಗೆ ನಿಜವಾದ ಸಾಧುಗಳು ಬೇಕಾಗಿದ್ದಾರೆ, ಅಂತಹ ಸಾಧುಗಳನ್ನು ತಯಾರಿಸು'' ಎಂದು ಅಂದಿನ ಸಂಘಾಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದರು ಟ್ರೇನಿಂಗ್ ಸೆಂಟರ್ ಪ್ರಾರಂಭವಾದಾಗ ಅವರಿಗೆ ಹೇಳಿದ್ದರು.

ನಿಜ ಹೇಳಬೇಕೆಂದರೆ, ಕೇವಲ ರೀತಿ-ನಿಯಮಾವಳಿಗಳಿಂದ ಸಾಧುಗಳು ಅಥವ ವ್ಯಕ್ತಿಗಳನ್ನು ತಯಾರಿಸಲಾಗದು. ಹೊಸದಾಗಿ ಬಂದ ಶಿಕ್ಷಾರ್ಥಿಗಳು ಶಿಕ್ಷಕರ ಜೀವನವನ್ನು ನೋಡುತ್ತಾರೆ. ಅವರು ಮೊದಲು ನೋಡುವುದು ಶಿಕ್ಷಕರ ಚರಿತ್ರೆಯನ್ನು -ಅವರು ಕಾಮಕಾಂಚನ ಹಾಗೂ ಹೆಸರು-ಕೀರ್ತಿಗಳ ಲಾಲಸೆಯನ್ನು ತ್ಯಜಿಸಿದ್ದಾರೆಯೇ ಎಂಬುದನ್ನು. ಬಳಿಕ ಅವರ ಪವಿತ್ರತೆ, ಪ್ರೇಮ ಹಾಗೂ ಪಾಂಡಿತ್ಯವನ್ನು ನೋಡುವರು. ಅಷ್ಟು ಮಾತ್ರವಲ್ಲದೆ ಶಿಕ್ಷಕರು ಕಲಿಸುವ ವಿಚಾರಗಳನ್ನು ಅವರು ತಮ್ಮ ಸ್ವಂತ ಜೀವನದಲ್ಲಿ ಪಾಲಿಸುತ್ತಿರುವರೋ ಎಂಬುದನ್ನೂ ತಿಳಿದುಕೊಳ್ಳುವರು. ಆಚರಣೆಯಿಂದ ಆಚಾರ್ಯನು ನಿರೂಪಿತನಾಗುತ್ತಾನೆ. ಶಿಕ್ಷಕನ ನಡತೆಯಿಂದ ವಿದ್ಯಾರ್ಥಿಯು ಕಲಿಯುತ್ತಾನೆ. ಗುರು ಅಥವಾ ಶಿಕ್ಷಕನಾಗುವುದೆಂದರೆ ವಿದ್ಯಾರ್ಥಿಯಾಗಿರುವುದಕ್ಕಿಂತ ಕಠಿಣವೇ ಸರಿ.



೧೯೫೯ರಿಂದ ೧೯೭೮ರ ತನಕ ಭವ ಮಹಾರಾಜರೊಡನೆ ನನಗೆ ನಿಕಟ ಪರಿಚಯವಿದ್ದು, ಎರಡು ವರ್ಷ (೧೯೬೪-೬೬) ಟ್ರೇನಿಂಗ್ ಸೆಂಟರ್‌ನಲ್ಲಿ ಅವರಿಂದ ಶಿಕ್ಷಣವನ್ನೂ ಪಡೆದಿದ್ದೇನೆ.

**ಭವ ಮಹಾರಾಜ್:** ಒಬ್ಬ ಒಳ್ಳೆಯ ಸಾಧುವಿನ ದರ್ಶನ ಮಾಡಿಸುವ ಸಲುವಾಗಿ ನನ್ನ ಸ್ನೇಹಿತ ನನ್ನನ್ನು ಬೇಲೂರು ಮಠಕ್ಕೆ ಕರೆತಂದಾಗ, ಶ್ರೀರಾಮಕೃಷ್ಣರ ಮಾನಸಪುತ್ರರಾದ ಸ್ವಾಮಿ ಬ್ರಹ್ಮಾನಂದರನ್ನು ಕಂಡೆ. ಬಳಿಕ ಶ್ರೀರಾಮಕೃಷ್ಣರ ಪವಿತ್ರ ತ್ಯಾಗಿ ಶಿಷ್ಯರುಗಳ ಸಂಗವನ್ನು ಮಾಡಿದೆ. ಮಹಾಪುರುಷ ಮಹಾರಾಜರು ಒಂದು ದಿನ ನನ್ನನ್ನು ಮಾಸ್ಟರ್ ಮಹಾಶಯರನ್ನು ಕಾಣಲು ಕಳುಹಿಸಿದರು. ಅವರಲ್ಲಿಗೆ ಹೋಗಿ ನೇರವಾಗಿ ಅವರ ಬಳಿಸಾರಿ ಅವರನ್ನೇ ಕೇಳಿದೆ: ''ನಾನು ಮಾಸ್ಟರ್ ಮಹಾಶಯರನ್ನು ಕಾಣಲು ಬಂದಿರುವೆ.'' ತಲೆಯಾಡಿಸುತ್ತ ಅವರು ಶಾಂತಚಿತ್ತರಾಗಿ ಹೇಳಿದರು, ''ಸರಿ, ಸರಿ, ನೋಡುವೆಯಂತೆ. ಉತ್ತಮ ಸಾಧು ಯಾರೆಂದರೆ, ಯಾರು ಒಳ್ಳೆಯ ಧ್ಯಾನ ಮಾಡುತ್ತಾರೋ, ಹಾಗೂ ಭಗವಂತನಲ್ಲಿ ಒಂದಾಗುತ್ತಾರೋ

ಅವರು''ಎಂದರು. ಸಾಧುಗಳನ್ನು ಗುರುತಿಸುವುದು ಹೇಗೆಂಬುದನ್ನು ಅಂದು ನಾನು ಮಾಸ್ಟರ್ ಮಹಾಶಯರಿಂದ ತಿಳಿದೆ.

**ಪ್ರಶ್ನೆ:** ಮಹಾರಾಜ್, ಗಾಢವಾದ ಧ್ಯಾನದಲ್ಲಿ ಮಗ್ನರಾಗುವುದು ಹೇಗೆ?

**ಭವ ಮಹಾರಾಜ್:** (ಮಠದ ಹಿರಿಯ ಸಾಧುಗಳೊಬ್ಬರನ್ನು ತೋರುತ್ತ) ಆ ಹಿರಿಯ ಸಾಧುಗಳನ್ನು ನೋಡುತ್ತಿರುವೆಯಲ್ಲ. ಆ ಉನ್ನತ ಸ್ಥಿತಿಯನ್ನು ಪಡೆಯಲು ಅವರು ೪೦ ವರ್ಷಗಳಿಂದ ಪ್ರಯತ್ನಿಸುತ್ತಿದ್ದಾರೆ. ನೀನು ಅದನ್ನು ಇಂದೇ ಪಡೆಯಲು ಹೊರಟಿರುವೆಯಲ್ಲ! ನಿರಂತರ ಅಭ್ಯಾಸವನ್ನು ಮಾಡು. ನೀನು ಆಗಾಗ 'ಉದ್ಬೋಧನ'ಕ್ಕೆ ಹೋಗುತ್ತೀಯೆ. ಟ್ರಾಮ್-ಬಸ್ಸುಗಳಲ್ಲಿ ಹೋಗುವಾಗ ಶ್ರೀಮಾತೆಯವರ ಚಿಂತನೆಯನ್ನು ಮಾಡು, ಬೇರಾವ ಚಿಂತನೆಯನ್ನೂ ಮಾಡಬೇಡ.

ಬಳಿಕ ಅವರು ಸ್ವಾಮೀಜಿಯವರ 'ಜ್ಞಾನಯೋಗ'ದಿಂದ ಒಂದು ಅಂಶವನ್ನು ಉಲ್ಲೇಖಿಸಿದರು, ''ನಿನ್ನ ಕಾಲಿನ ಮೇಲೆ ನಿಲ್ಲು. ನಿನ್ನ ಪ್ರತಿಯೊಂದು ಅಸತ್-ಚಿಂತನೆ, ಅಸತ್-ಕಾರ್ಯಗಳು ವ್ಯಾಘ್ರದಂತೆ ನಿನ್ನ ಮೇಲೆರಗಲು ತಯಾರಾಗಿರುವಂತೆ ನಿನ್ನ ಸತ್-ಚಿಂತನೆ ಹಾಗೂ ಸತ್ಕಾರ್ಯಗಳು ದೇವತೆಗಳ ಒಲವನ್ನು ಹೊಂದಿ ನಿನ್ನನ್ನು ರಕ್ಷಿಸಲು ಉದ್ಯತವಾಗಿವೆ.''

### ೨೮.೨.೧೯೬೦, ಶ್ರೀರಾಮಕೃಷ್ಣ ಜಯಂತಿ

ನಾನು ಆಶ್ರಮವನ್ನು ಸೇರಿದ ಈ ದಿನ, ಅದ್ವೈತ ಆಶ್ರಮದ ಇತರ ಸಾಧು-ಬ್ರಹ್ಮಚಾರಿಗಳೊಡನೆ ಬೇಲೂರು ಮಠಕ್ಕೆ ಹೋದೆ. ಭವ ಮಹಾರಾಜರನ್ನು ಭೇಟಿಯಾದಾಗ ಅವರು ಅತ್ಯಂತ ಸಂತಸದಿಂದ, ''Many are called, but few are chosen'' ಎಂದರು. ಅನಂತರ ಕರ್ಮಕ್ಕೆ ಸಂಬಂಧಪಟ್ಟಂತೆ ಹೇಳಿದರು, ''ಜೀವನದೊಂದಿಗೆ ಶ್ರೀರಾಮಕೃಷ್ಣರನ್ನು ಏಕೀಕರಿಸಿಕೋ. ಕೆಲಸ ಮಾಡುವಾಗ, ಆತನ ಕೆಲಸವನ್ನೇ ಮಾಡುತ್ತಿರುವುದಾಗಿ ತಿಳಿ. ಸದಾ ಆತನ ಚಿಂತನೆಯನ್ನು ಮಾಡು.''

### ೨೯.೫.೧೯೬೦, ಬೇಲೂರು ಮಠ

ಇಂದು ರವಿವಾರ. ಬೇಲೂರು ಮಠಕ್ಕೆ ಹೋದಾಗ ಭವ ಮಹಾರಾಜರು ದೇವಘರದ ತಮ್ಮ ಬ್ರಹ್ಮಚಾರಿ ಜೀವನವನ್ನು ಕುರಿತು ಎರಡು ಘಟನೆಗಳನ್ನು ಹೇಳಿದರು:

''ಮಹಾಪುರುಷ ಮಹಾರಾಜರು ದೇವಘರದ ಆಶ್ರಮದಲ್ಲಿ ಒಬ್ಬ ಅಡಿಗೆ ಭಟ್ಟ ಹಾಗೂ ಒಬ್ಬ ಕೆಲಸದವನಿಗೆ ಮಂತ್ರ ದೀಕ್ಷೆ ನೀಡಿದರು. ಆ ದಿನ ರಾತ್ರಿ ಮಹಾರಾಜರು ಉಬ್ಬಸದಿಂದ ಮರಣಾಂತಿಕ ಕಷ್ಟಕ್ಕೀಡಾದರು. ಮಾರನೆಯ ದಿನ ಸಾಧುಗಳು ಅವರಿಗೆ ಪ್ರಣಾಮ ಮಾಡಲು ಹೋದಾಗ ಮಹಾಪುರುಷ ಮಹಾರಾಜರು, 'ನೋವು ವಿಪರೀತ ಉಲ್ಬಣಗೊಂಡಾಗ ಮನಸ್ಸನ್ನು ಇದರ ಮೇಲೆ ಏಕಾಗ್ರಗೊಳಿಸಿದೆ. ಆಗ ನೋವು ಹೊರಟು ಹೋಗಿತ್ತು' ಎಂದರು. ಒಬ್ಬ ಸಾಧುಗಳು, ' 'ಇದು' ಎಂದರೇನು, ಮಹಾರಾಜ್?' ಎಂದು ಪ್ರಶ್ನಿಸಿದಾಗ ಅವರು 'ಅದೇನೆಂದರೆ, ಆತ್ಮ' ಎಂದು ಉತ್ತರಿಸಿದರು.

''ಒಂದು ದಿನ ನನ್ನನ್ನು ಮಹಾಪುರುಷ ಮಹಾರಾಜರು 'ಕೆಲಸವನ್ನು ಹೇಗೆ ಮಾಡಬೇಕು? ಹೇಳು ನೋಡೋಣ' ಎಂದರು. ಅವರು ಕೂಡಲೇ ಹೇಳಿದರು ''That's it! That's it. privilege-privilege.'' ಅವರು ಹೇಳಿದ ಈ ಮಾತುಗಳು ಮನಸ್ಸಿಗೆ ನಾಟಿದವು. ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮೀಜಿಯವರ ಕೆಲಸವನ್ನು ಮಾಡುವ ಸದವಕಾಶ ಹಾಗೂ ಸೌಭಾಗ್ಯ ಎಷ್ಟು ಮಂದಿಗೆ ತಾನೆ ಲಭಿಸುತ್ತದೆ?''

### ೧೨.೬.೧೯೬೦, ಬೇಲೂರು ಮಠ

ಭವ ಮಹಾರಾಜರು ಸ್ವಯಂಪ್ರೇರಿತರಾಗಿ ಹೇಳಿದರು, ''ನೋಡು, ಈಚೆಗೆ ಒಂದೆರಡು ದಿನಗಳಿಂದ ಒಂದು ವಿಷಯವನ್ನು ಆಲೋಚಿಸುತ್ತಿರುವೆ. ಮನುಷ್ಯನು ಸಾಮಾನ್ಯವಾಗಿ ತನ್ನ ಭೂತಕಾಲದ ಘಟನೆಗಳ ನಡುವೆಯೇ ಜೀವಿಸುತ್ತಾನೆ. ಭೂತಕಾಲದ ಘಟನೆಗಳಿಂದ ಸುತ್ತುವರಿಯಲ್ಪಟ್ಟ ಅವನು ತಾನು ಹಿಂದೆ ಮಾಡಿದ ತಪ್ಪುಗಳನ್ನೇ ಮೆಲಕುಹಾಕುತ್ತಾನೆ.

''ತಂದೆ-ತಾಯಿ, ಸೋದರ-ಸೋದರಿ ಇವರೆಲ್ಲ ನಮ್ಮ ಅಚ್ಚುಮೆಚ್ಚಿನ ಬಾಂಧವರು. ನಾವು 'ಪೂರ್ವಜನ್ಮ'ದಲ್ಲಿ ವಿಶ್ವಾಸವುಳ್ಳವರು. ಇದಕ್ಕೆ ಮೊದಲು ನಾವು ಅದೆಷ್ಟು ತಾಯಿ-ತಂದೆ, ಸೋದರ-ಸೋದರಿಯರೊಂದಿಗಿದ್ದು ಬಂದಿದ್ದೇವೆ! ಇವರಾರೂ ನಮ್ಮೊಡನೆ ಬರಲಿಲ್ಲ, ಹೋಗುವುದೂ ಇಲ್ಲ. ಜೀವಿಯು ಸಾಮಾನ್ಯವಾಗಿ ತನ್ನ ಸಂಸ್ಕಾರ ಹಾಗೂ ಇಚ್ಛೆಗಳು ಪೂರ್ಣಗೊಳ್ಳುವಂಥ ತಂದೆ-ತಾಯಿಯರ ಬಳಿ ಜನ್ಮಗ್ರಹಣ ಮಾಡುತ್ತಾನೆ.

''ಈಶ್ವರ-ದರ್ಶನವೆ ನಮ್ಮೆಲ್ಲರ ಉದ್ದೇಶ. ನಮ್ಮನ್ನು ಭ್ರಮೆಗೊಳಿಸುವಂತಹ ನಮ್ಮ ಹಿಂದಿನ ನೆನಪುಗಳು ಹಾಗೂ ತಂದೆ-ತಾಯಿಯರ ಬಗ್ಗೆ ಚಿಂತಿಸಿದಷ್ಟೂ ಅವು ನಮ್ಮ ಭಗವಚ್ಚಿಂತನೆಗೆ ಬಾಧಕವಾಗುತ್ತದೆ.''

ನನಗವರು ಹೇಳಿದ್ದರು, ''ಠಾಕೂರರನ್ನು ನಿನ್ನವರನ್ನಾಗಿ ಮಾಡಿಕೊ. ಎರಡು ನೌಕೆಗಳಲ್ಲಿ ಕಾಲಿರಿಸಬೇಡ. ಆತ್ಮೀಯ ಬಂಧು-ಬಾಂಧವರೊಡನೆ ಹೆಚ್ಚಾದ ಸಂಪರ್ಕವಿಟ್ಟುಕೊಂಡ ಸಾಧುಗಳು ಅಧ್ಯಾತ್ಮ ಪಥದಲ್ಲಿ ಹೆಚ್ಚಾಗಿ ಮುಂದುವರಿಯಲಾರರು.''

ಈ ಬಗ್ಗೆ ನನಗೆ ಅವರೊಂದು ಕತೆಯನ್ನು ಹೇಳಿದ್ದರು. ಒಬ್ಬಾತ ಎರಡು ಚಿಕ್ಕ ಕೆರೆಗಳನ್ನು ನಿರ್ಮಿಸಿದನು - ಒಂದು ಗಂಗಾನದಿಯ ಸಮೀಪದಲ್ಲಿ ಮತ್ತೊಂದು ಸ್ವಲ್ಪ ದೂರದಲ್ಲಿ. ಎರಡು ಕೆರೆಗಳೂ ಒಂದೇ ರೀತಿ ಆಳವಾಗಿದ್ದವು. ಬೇಸಿಗೆಯಲ್ಲಿ ಎರಡು ಕೆರೆಗಳ ನೀರೂ ಒಣಗಿದವು. ದೂರದ ಕೆರೆಯ ಮಣ್ಣು

ಬಿಸಿಲಿನ ತಾಪಕ್ಕೆ ಒಣಗಿ ಅಲ್ಲಲ್ಲಿ ಬಿರುಕುಬಿಟ್ಟಿತ್ತು. ಆದರೆ ಗಂಗೆಯ ಸಮೀಪದ ಕೆರೆಯ ಮಣ್ಣು ಒದ್ದೆಯಾಗಿತ್ತು. ವೈರಾಗ್ಯ ವಂತ ಸಾಧುವು ದೂರದ ಕೆರೆಯಂತೆ ಹಾಗೂ ಸಂಸಾರಾಸಕ್ತ ಸಾಧುವು ಗಂಗೆಯ ಸಮೀಪದ ಕೆರೆಯಂತೆ ಎಂಬ ಉದಾಹರಣೆ ಯನ್ನು ನೀಡಿದ್ದರು.

ಭವ ಮಹಾರಾಜರು ಆಲ್ಮೋರಾದಲ್ಲಿದ್ದಾಗ ಬ್ರಹ್ಮಚಾರಿ ರಾಮ ಮಹಾರಾಜರಿಂದ ಸ್ವಾಮೀಜಿಯ ಬಗ್ಗೆ ಈ ಸ್ಮೃತಿಕತೆ ಯನ್ನು ಕೇಳಿದರು : ''ಒಮ್ಮೆ ಬೇಲೂರು ಮಠಕ್ಕೆ ಹೋಗಿದ್ದೆ. ಸ್ವಾಮೀಜಿ ತಮ್ಮ ಮೇಕೆ 'ಮಟರು'ವಿನ ಹಾಲು ಕರೆಯು ತ್ತಿದ್ದರು. ಅದರ ಕೆಚ್ಚಲು ಬಹಳ ಕೆಳಗಿದ್ದುದರಿಂದ ಸ್ವಾಮೀಜಿಗೆ ಹಾಲು ಕರೆಯುವುದು ಕಷ್ಟವಾಗುತ್ತಿತ್ತು. ಅವರು ನನ್ನನ್ನು ನೋಡಿ, 'ಏಯ್ ಪೆದ್ದ, ನಿಂತು ಏನು ನೋಡುತ್ತಿರುವೆ? ಈ ಮೇಕೆಯ ಹಿಂಗಾಲುಗಳನ್ನು ಸ್ವಲ್ಪ ಮೇಲೆತ್ತು.' ನಾನು ಹಾಗೆ ಮಾಡಲು, ಪಂಪ್ ಮಾಡುವಂತೆ ಸ್ವಾಮೀಜಿಯವರು ಹಾಲು ಕರೆದರು. ಮಟರುವಿನ ಹಾಲು ಕರೆದಾದ ಬಳಿಕ ಹೇಳಿದರು, 'ಏನಪ್ಪ, ನಿನ್ನನ್ನು ಪೆದ್ದ ಎಂದು ಕರೆದೆನೆಂದು ಬೇಸರಿಸಕೊಳ್ಳಲಿಲ್ಲ ತಾನೆ? ಬೇಸರಿಸಿಕೊಳ್ಳಬೇಡ. ಅದೊಂದು ಹೆಸರು ಮಾತ್ರ. ನೋಡು ಈ ಪ್ರಪಂಚದಲ್ಲಿ ನಾಮ-ರೂಪಗಳೆಲ್ಲವೂ ಮಿಥ್ಯೆ. ಬ್ರಹ್ಮ ಮಾತ್ರವೇ ಏಕೈಕ ಸತ್ಯ ವಸ್ತು.' ''

ಭವ ಮಹಾರಾಜರು ಬೃಂದಾವನಕ್ಕೆ ತಪಸ್ಸು ಮಾಡಲು ಹೋಗಿದ್ದಾಗ ಸ್ವಾಮಿ ಜಗದಾನಂದರು ಅವರ ಪಕ್ಕದ ಕೋಣೆ ಯಲ್ಲಿದ್ದರು. ಸಾಯಂಕಾಲ ಅವರು ಕೆಲವು ಸಾಧುಗಳಿಗೆ ಶಾಸ್ತ್ರ ಗಳನ್ನು ಕಲಿಸುತ್ತಿದ್ದರು. ಇದರಿಂದಾಗಿ ಭವ ಮಹಾರಾಜರ ಧ್ಯಾನ-ಜಪಗಳಿಗೆ ತೊಂದರೆಯಾಗತೊಡಗಿತು. ಅವರು ಹಾಗೆಂದು ಒಂದು ದಿನ ಜಗದಾನಂದಜಿಯವರಿಗೆ ಹೇಳಿದರೆ ಅವರು ತಕ್ಷಣ ಹೇಳಿದರು, ''ಇಷ್ಟು ದಿನ ಏಕೆ ಹೇಳಲಿಲ್ಲ? ನಾನೊಬ್ಬ ಸಾಧು ವಾಗಿದ್ದು ಮತ್ತೊಬ್ಬ ಸಾಧುವಿನ ಧ್ಯಾನ-ಜಪಕ್ಕೆ ವಿಘ್ನವನ್ನುಂಟು ಮಾಡಲೆ? ಇದು ಎಂದಾದರೂ ಸಾಧ್ಯವೆ? ಸೋದರ, ನೀನು ಧ್ಯಾನ-ಜಪಗಳನ್ನು ಮಾಡು. ನಾನು ಅವರ ಕ್ಲಾಸನ್ನು ಬೇರೆಡೆ ತೆಗೆದುಕೊಳ್ಳುವೆ'' ಎಂದರು. ಇಂತಹ ಮಹಾನ್ ಸಾಧುಗಳ ಆಚರಣೆಯು ನಮ್ಮ ಅನುಕರಣೆಗೆ ಯೋಗ್ಯ.

೧೯೬೪ನೇ ಇಸವಿ. ಬೇಲೂರು ಮಠದಲ್ಲಿ ಸ್ವಾಮಿ ಬೋಧಾತ್ಮಾ ನಂದರು ಒಂದು ದಿನ ಶರತ್ ಮಹಾರಾಜರ ಸ್ಮೃತಿಯ ತುಣು ಕನ್ನು ಹೇಳಿದರು, ''ಒಮ್ಮೆ ಒಂದು ಜರೂರಿ ಪತ್ರವನ್ನು ತೆಗೆದು ಕೊಂಡು ಬೇಲೂರು ಮಠದಿಂದ 'ಉದ್ಬೋಧನ'ಕ್ಕೆ ಹೋದೆ. ಆಗ ಶರತ್ ಮಹಾರಾಜರು ತಮ್ಮ ಚಿಕ್ಕ ಕೋಣೆಯಲ್ಲಿ ಕುಳಿತು ಹುಕ್ಕಾ ಸೇದುತ್ತಿದ್ದರು. ನಾನೆಂದೆ, 'ಮಹಾರಾಜ್, ಈ ಜರೂರಿ ಪತ್ರವನ್ನು ಮಠದ ಆಫೀಸಿನಿಂದ ನಿಮಗಾಗಿ ತಂದಿರುವೆ.' ತಕ್ಷಣ ವೇ ಅವರು ಹುಕ್ಕಾದ ನಳಿಕೆಯನ್ನು ಕೆಳಗಿರಿಸಿ ಪಕ್ಕಕ್ಕೆ ಸರಿಸಿದರು. ಕನ್ನಡಕವನ್ನು ಧರಿಸಿ ಕತ್ತರಿಯಿಂದ ಕವರನ್ನು ಕತ್ತರಿಸಿ ಪತ್ರವನ್ನು ಓದಿದರು. ಮತ್ತೆ ಕತ್ತರಿಯನ್ನು ಅದರ ಜಾಗದಲ್ಲಿಟ್ಟು, ಪತ್ರ ವನ್ನು ಕವರಿನಲ್ಲಿರಿಸಿ ಡೆಸ್ಕಿನ ಬಲಗಡೆಯಲ್ಲಿರಿಸಿದರು. ನಂತರ ನಳಿಕೆಯನ್ನು ಹಿಡಿದು ಮತ್ತೆ ತಂಬಾಕು ಸೇದಲಾರಂಭಿಸಿದರು. ಇದನ್ನು ನೋಡಿದ ನನಗೆ ಇವರು ಸದಾ ಭಗವಂತನಲ್ಲಿ ನೆಲೆಸಿರು ತ್ತಾರೆಂದು ಭಾಸವಾಯಿತು. ಠಾಕೂರರ ಕಾರ್ಯಕ್ಕಾಗಿ ಮನ ಸ್ಸನ್ನು ಕೆಳಗಿಳಿಸುತ್ತಾರೆ. ಕೆಲಸವು ಪೂರ್ಣವಾದ ಬಳಿಕ ಮತ್ತೆ ಭಗವಂತನ ಸಾನ್ನಿಧ್ಯದಲ್ಲಿ ಮಗ್ನರಾಗುತ್ತಾರೆ.''

ಭವ ಮಹಾರಾಜರು ಅತ್ಯುತ್ತಮ ಸಾಧುಗಳಾಗಿದ್ದರು. ಸಾಧುಗಳು ಹೇಗಿರಬೇಕೆಂಬುದನ್ನು ಅವರು ಸದಾ ನೆನಪಿಸು ತ್ತಿದ್ದರು. ಅವರೊಮ್ಮೆ ಮೋಜಿನಿಂದ ಹೇಳಿದ್ದುಂಟು : ''ನೋಡು ಮೂರು ಬಗೆಯ ಸಾಧುಗಳಿದ್ದಾರೆ. ಎಣ್ಣೆಯಲ್ಲಿ ಕರಿದ ಸಾಧು ಗಳು, ತುಪ್ಪದಲ್ಲಿ ಕರಿದ ಸಾಧುಗಳು ಹಾಗೂ ತುಪ್ಪದಲ್ಲಿ ಕರಿದು ಸಕ್ಕರೆ ಪಾಕದಲ್ಲಿ ಮುಳುಗಿಸಿದ ಸಾಧುಗಳು! ಎಣ್ಣೆಯಲ್ಲಿ ಕರಿದ ಸಾಧುಗಳು ಬಹಿರ್ಮುಖ ವೃತ್ತಿಗಳನ್ನು ಹೊಂದಿರುತ್ತಾರೆ. ಒಳ್ಳೆಯ ವಸ್ತ್ರ, ಸುಖವನ್ನು ಹುಡುಕಿಕೊಂಡು ಹೋಗುತ್ತಾರೆ. ತುಪ್ಪದಲ್ಲಿ ಕರಿದ ಸಾಧುಗಳು ಅಂತರ್ಮುಖಿಗಳು — ತಮ್ಮ ಸಮಯವನ್ನು ಶಾಸ್ತ್ರಾಧ್ಯಯನ ಹಾಗೂ ಧ್ಯಾನಜಪಗಳಲ್ಲಿ ಕಳೆಯುತ್ತಾರೆ. ಇವರಲ್ಲಿ ನಾವು ತ್ಯಾಗ-ವೈರಾಗ್ಯಗಳನ್ನು ಕಾಣು ತ್ತೇವೆ. ಮತ್ತೆ, ಶಾಸ್ತ್ರಜ್ಞರೂ ಸಾಧಕರೂ ಆದ ಸಾಧುಗಳು ತುಪ್ಪ ದಲ್ಲಿ ಕರಿದು ಸಕ್ಕರೆ ಪಾಕದಲ್ಲಿ ಅದ್ದಿರುವಂತೆ. ಇವರು ಸ್ವತಃ ತಮ್ಮನ್ನು ವೈರಾಗ್ಯದ ತುಪ್ಪದಲ್ಲಿ ಕರಿದುಕೊಂಡು ಭಕ್ತಿರಸದಲ್ಲಿ ಮುಳುಗಿಸಿರುತ್ತಾರೆ. ಇಂಥವರು ಜ್ಞಾನಮಿಶ್ರಿತ ಭಕ್ತಿಯ ಪ್ರಭಾವ ದಿಂದ ಆನಂದದಲ್ಲಿ ಮಗ್ನರಾಗಿದ್ದು ಇತರರಿಗೂ ಆನಂದವನ್ನು ನೀಡುವರು. ಈ ಮೂರು ಗ್ರೂಪಿನಲ್ಲಿ ನೀನು ಯಾವ ಗ್ರೂಪಿಗೆ ಸೇರಿರುವೆಯೆಂದು ನೋಡು.''

ನಂತರ ಅವರು ಬೇಲೂರು ಮಠದ ಸಾಧುಗಳ ಬಗ್ಗೆ ಶ್ರೀ 'ಮ' ಅವರಿಂದ ಏನು ಕೇಳಿದ್ದರೆಂಬುದನ್ನು ಹೇಳಿದರು. ''ಮಠದ ಸಂನ್ಯಾಸಿಗಳು ಬರಿಯ ಗುಲ್ಲೆಬ್ಬಿಸುವ ಪಾರಿವಾಳ ಗಳಂತಲ್ಲ. ಅವರು ಬಹಳ ಎತ್ತರಕ್ಕೆ ಹಾರಿ ಇತರ ಪಾರಿವಾಳ ಗಳನ್ನೂ ಆಕರ್ಷಿಸಿ ತಮ್ಮ ದಳಕ್ಕೆ ಸೇರಿಸಿಕೊಳ್ಳುವರು.''

*(ಮುಂದಿನ ಸಂಚಿಕೆಗೆ)*

ಒಂದು ವಸ್ತು ಎಷ್ಟೇ ಕ್ಷುಲ್ಲಕವೆನಿಸಿದರೂ ಅದನ್ನು ಅಲಕ್ಷ್ಯ ಮಾಡಬಾರದು. ಪ್ರತಿಯೊಂದಕ್ಕೂ ಅದಕ್ಕೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಬೇಕು. ಒಂದು ಪೊರಕೆಯನ್ನೂ ಗೌರವದಿಂದ ಕಾಣಬೇಕು. ತೀರ ಸಣ್ಣ ಕೆಲಸವನ್ನೂ ಕೂಡ ಗೌರವದಿಂದ ಮಾಡಬೇಕು.

— ಶ್ರೀ ಶಾರದಾದೇವಿ